ಒ.ಎಸ್.ನಂ. 166/2023 PW-2

(ಇಂದು ದಿನಾಂಕಃ 06-04-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**<u>ಪಾಟೀ ಸವಾಲುಃ 4 ರಿಂದ 7 ರ ಪ್ರತಿವಾದಿ ಪರ ಬಿ.ಎಸ್. ವಕೀಲರಿಂದಃ</u>**

ಲಾಲಪ್ಪನಿಗೆ 1 ನೇ ಪ್ರತಿವಾದಿ ಒಬ್ಬನೇ ಮಗ ಎಂದರೆ ಸರಿ. ಲಚಪ್ಪನಿಗೆ 4 ಕೊಣೆಗಳ ಮನೆ ಮತ್ತು 40 ಎಕರೆ ಜಮೀನು ಆತನ ತಂದೆಯಿಂದ ಆತನಿಗೆ ಬಂದಿರುತ್ತದೆ. ಸರ್ವೆ ನಂ. 48 ಮತ್ತು 49 ರಲ್ಲಿ ಆತನಿಗೆ ಜಮೀನು ಬಂದಿರುತ್ತದೆ. ಅವುಗಳ ವಿಸ್ತೀರ್ಣ ಹೇಳಲು ನನಗೆ ಬರುವುದಿಲ್ಲ. ಸರ್ವೆ ನಂ. 49 ರಲ್ಲಿ 20 ಎಕರೆ 32 ಗುಂಟೆ ಇದೆ ಎಂದರೆ ನನಗೆ ಗೊತ್ತಿಲ್ಲ. ಅದರಲ್ಲಿ 2 ಎಕರೆ ಜಮೀನನ್ನು 6ನೇ ಪ್ರತಿವಾದಿಗೆ ವಾದಿ ಮತ್ತು ಪ್ರತಿವಾದಿ 1 ರಿಂದ 3 ರವರು ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆ ಖರೀದಿ ಪತ್ರಕ್ಕೆ ಕವಿತಾ ಸಹಿ ಮಾಡಿರುತ್ತಾಳೆ ಎಂದರೆ ಮಾಡಿರುವುದಿಲ್ಲ.

ಸರ್ವೆ ನಂ. 48 ರ ಎಷ್ಟು ಕ್ಷೇತ್ರದಲ್ಲಿ ವಾದಿ ಮತ್ತು ಪ್ರತಿವಾದಿ 1 ರಿಂದ 3 ರವರು ಕಬ್ಜೆ ಇದ್ದ ವಿಷಯ ನನಗೆ ಗೊತ್ತಿಲ್ಲ. ಸರ್ವೆ ನಂ. 48/3 ರ ಕ್ಷೇತ್ರದ ಪೈಕಿ 5 ಎಕರೆ ಕ್ಷೇತ್ರವನ್ನು ಶಂಕ್ರಪ್ಪ ತಂದೆ ವೀರಪ್ಪ ಜಟ್ಟೂರು ಇವರಿಗೆ 1ನೇ ಪ್ರತಿವಾದಿ ಮಾರಾಟ ಮಾಡಿದ ವಿಷಯ ನನಗೆ ಗೊತ್ತಿಲ್ಲ. ಅದೇ ಸರ್ವೆ ನಂ. 48 ರಲ್ಲಿ 5 ಎಕರೆ ಕ್ಷೇತ್ರವನ್ನು ನಾಗಪ್ಪ ಇವರಿಗೆ 1ನೇ ಪ್ರತಿವಾದಿ ಮಾರಾಟ ಮಾಡಿದ ವಿಷಯ ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿ 4 ಮತ್ತು 5ನೇ ಪ್ರತಿವಾದಿಗೆ ಜಮೀನು ಮಾರಾಟ ಮಾಡಿದ ವಿಷಯ ನನಗೆ ಗೊತ್ತಿಲ್ಲ. 4 ಮತ್ತು 5ನೇ ಪ್ರತಿವಾದಿಯರು ಖರೀದಿ ಪಡೆದ ಜಮೀನನ್ನು 7ನೇ ಪ್ರತಿವಾದಿಗೆ ಮಾರಾಟ ಮಾಡಿದ ವಿಷಯ ನನಗೆ ಗೊತ್ತಿಲ್ಲ. ವಾದಿ ಮತ್ತು ಪ್ರತಿವಾದಿ 1 ರಿಂದ 3 ರವರ ಮಾತು ಕೇಳಿ 6 ಮತ್ತು 7ನೇ ಪ್ರತಿವಾದಿಗೆಯರಿಗೆ ತೊಂದರೆ ಕೊಡುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷಿ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,

ಮತ್ತು ಜೆ.ಎಮ್. ಎಫ್. ಸಿ, ಚಿಂಚೋಳಿ.